# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: : 129 (1069)
ಮಾನ್ಯ ಸದಸ್ಯರ ಹೆಸರು :ಡಾ: ತಳವಾರ್ ಸಾಬಣ್ಣ
(ನಾಮ ನಿರ್ದೇಶನ ಹೊಂದಿದವರು)
ಉತ್ತರಿಸುವ ಸಚಿವರು :ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು
ಉತ್ತರಿಸಬೇಕಾದ ದಿನಾಂಕ :21-03-2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲೆಗಳ ಜಾಗದ/ಆಸ್ತಿಯ ಸಮಸ್ಯೆ ಇದ್ದು, ಅವು ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು |
| (ಆ) | ರಾಜ್ಯದಲ್ಲಿ ಈ ರೀತಿ ಜಾಗದ/ಆಸ್ತಿಯ ಸಮಸ್ಯೆಯಿರುವ ಎಷ್ಟು ಸರಕಾರಿ ಶಾಲೆಗಳಿವೆ; | ಸರ್ಕಾರಿ ಪ್ರಾಥಮಿಕ ಹಾಗೂ ಸರ್ಕಾರಿ ಪ್ರೌಢ ಶಾಲೆಗಳಿಗೆ ಸಂಬಂಧಿಸಿದಂತೆ ಆಯಾ ಶಾಲೆಯ ಹೆಸರಿಗೆ ಖಾತೆಯಾಗಿರುವ ಮತ್ತು ಖಾತೆಯಾಗದಿರುವ ಕುರಿತಾದ ವಿವರಗಳನ್ನು **ಅನುಬಂಧ-1 & ಅನುಬಂಧ-2** ರಲ್ಲಿ ಒದಗಿಸಲಾಗಿದೆ. |
| (ಇ) | ಬೆಳಗಾವಿ ನಗರದಲ್ಲಿಯ 120 ಸರಕಾರಿ ಶಾಲೆಗಳಲ್ಲಿ ಸುಮಾರು 65 ಸರಕಾರಿ ಶಾಲೆಗಳ ಜಾಗ ಸರ್ಕಾರದ ಹೆಸರಿನಲ್ಲಿರದೆ ಮಹಾನಗರ ಪಾಲಿಕೆ ಹೆಸರಿನಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು.<br><br>ಬೆಳಗಾವಿ ನಗರದಲ್ಲಿ ಒಟ್ಟು 138 ಸರ್ಕಾರಿ ಪ್ರಾಥಮಿಕ ಶಾಲೆಗಳು ಇದ್ದು, ಅವುಗಳ ಪೈಕಿ 46 ಶಾಲೆಗಳ ಆಸ್ತಿಗಳು ಮೊದಲಿನಿಂದಲೂ ಮಹಾನಗರ ಪಾಲಿಕೆ ಹೆಸರಿನಲ್ಲಿವೆ. 29 ಶಾಲೆಗಳ ಆಸ್ತಿಗಳು ಶಾಲಾ ಶಿಕ್ಷಣ ಇಲಾಖೆಯ ಹೆಸರಿನಲ್ಲಿ ಇರುತ್ತವೆ. ಉಳಿದಂತೆ 63 ಶಾಲೆಗಳ ಆಸ್ತಿಗಳು ವಿವಿಧ ಇಲಾಖೆ ಮತ್ತು ಇತರರ ಹೆಸರಿನಲ್ಲಿ ಇರುತ್ತವೆ.<br><br>ಮಹಾನಗರ ಪಾಲಿಕೆಯ ಹೆಸರಿನಲ್ಲಿರುವ 46 ಸರ್ಕಾರಿ ಪ್ರಾಥಮಿಕ ಶಾಲೆಗಳ ಆಸ್ತಿಗಳನ್ನು ಶಾಲಾ ಶಿಕ್ಷಣ ಇಲಾಖೆಯ ಹೆಸರಿನಲ್ಲಿ ಖಾತೆ ಮಾಡಿಸಲು ದಿನಾಂಕ: 03-10-2022 ಹಾಗೂ 15-02-2025 ಗಳಂದು ಬೆಳಗಾವಿ ಮಹಾನಗರ ಪಾಲಿಕೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.<br><br>ಉಳಿದಂತೆ, ಆಯಾ ಶಾಲೆಯ ಹೆಸರಿನಲ್ಲಿ ಇಲ್ಲದ 63 ಸರ್ಕಾರಿ ಪ್ರಾಥಮಿಕ ಶಾಲೆಗಳ ಆಸ್ತಿಗಳನ್ನೂ ಸಹ |

| | | |
|---|---|---|
| | | ಸಂಬಂದಪಟ್ಟ ಶಾಲೆಯ / ಶಾಲಾ ಶಿಕ್ಷಣ ಇಲಾಖೆಯ ಹೆಸರಿನಲ್ಲಿ ಖಾತೆ ಮಾಡಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು.<br><br>ಮುಂದುವರೆದು, ಬೆಳಗಾವಿ ನಗರದಲ್ಲಿ ಒಟ್ಟು 10 ಸರ್ಕಾರಿ ಪ್ರೌಢ ಶಾಲೆಗಳು ಇದ್ದು, ಈ ಪೈಕಿ 3 ಪ್ರೌಢಶಾಲೆಗಳ ಆಸ್ತಿಗಳು ಶಾಲಾ ಶಿಕ್ಷಣ ಇಲಾಖೆಯ ಹೆಸರಿನಲ್ಲಿ ಇರುತ್ತವೆ. ಇನ್ನುಳಿದ 7 ಪ್ರೌಢ ಶಾಲೆಗಳ ಆಸ್ತಿಗಳ ಪೈಕಿ 1 ಪ್ರೌಢ ಶಾಲೆಯ ಆಸ್ತಿಯು ಸರ್ಕಾರಿ ಪ್ರಾಥಮಿಕ ಶಾಲೆಯ ಹೆಸರಿನಲ್ಲಿವೆ. 2 ಪ್ರೌಢ ಶಾಲೆಗಳ ಆಸ್ತಿಗಳು ಸ್ಥಳೀಯ ಸಂಸ್ಥೆಗಳ ಹೆಸರಿನಲ್ಲಿದೆ. ಹಾಗೂ ಉಳಿದ 4 ಸರ್ಕಾರಿ ಪ್ರೌಢಶಾಲೆಗಳ ಆಸ್ತಿಗಳು ಇತರರ ಹೆಸರಿನಲ್ಲಿರುತ್ತವೆ. ಸದರಿ ಶಾಲೆಗಳ ಆಸ್ತಿಗಳನ್ನೂ ಸಹ ಸದರಿ ಶಾಲೆಗಳ / ಶಾಲಾ ಶಿಕ್ಷಣ ಇಲಾಖೆಯ ಹೆಸರಿನಲ್ಲಿ ಖಾತೆ ಮಾಡಿಸಲು ನಿಯಮಾನುಸಾರ ಕ್ರಮವಹಿಸಲಾಗುವುದು. |
| (ಈ) | ಶಾಲೆಗಳ ಆಸ್ತಿ ಸರ್ಕಾರದ ಹೆಸರಿನಲ್ಲಿರದ ಕಾರಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನ ನೀಡಲು ತೊಡಕಾಗಿದೆ; ಇದನ್ನು ತಕ್ಷಣ ಪರಿಹರಿಸಲಾಗುವುದೇ; | ಇಂತಹ ಸಮಸ್ಯೆಯನ್ನು ಪರಿಹರಿಸಿ, ಸರ್ಕಾರಿ ಶಾಲೆಗಳ ಆಸ್ತಿಗಳನ್ನು ಸಂಬಂಧಪಟ್ಟ ಶಾಲೆಯ ಹೆಸರಿನಲ್ಲಿ ಖಾತೆ ಮಾಡಿಸಿ ಸಂರಕ್ಷಿಸಲು ಕೆಳಕಂಡಂತೆ ಸುತ್ತೋಲೆಗಳನ್ನು ಹೊರಡಿಸಿ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿದೆ.<br>1. ಕಂದಾಯ ಸಚಿವಾಲಯದ ಸುತ್ತೋಲೆ ಸಂಖ್ಯೆ: ಕಂಇ 66 ಟಿಆರ್‌ಎಂ 2022 ದಿನಾಂಕ: 30.03.2022.<br>2. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವಾಲಯದ ಸುತ್ತೋಲೆ ಸಂಖ್ಯೆ: ಇಪಿ 274 ಪಿಬಿಎಸ್ 2021 ದಿನಾಂಕ: 23.05.2022.<br>3. ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಯ ಸುತೋಲೆ ಸಂಖ್ಯೆ: ಎಡಿಎಂ2(2)ಕ.ದೂ/ 76/2016-17/22-23 ದಿನಾಂಕ: 02.08.2022 & 27.11.2023.<br>4. ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಈ ಕಛೇರಿಯ ಸುತೋಲೆ ಸಂಖ್ಯೆ: DPI-CPI0ADM2(OTH)/ 317/2024/ 2024-25 ದಿನಾಂಕ: 05.10.2024.<br><br>ಶಾಲಾ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ 2022-23, 2023-24 ಮತ್ತು 2024-25ನೇ ಸಾಲುಗಳಲ್ಲಿ "**ಸರ್ಕಾರಿ ಶಾಲಾ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಯ ಆಸ್ತಿ ಸಂರಕ್ಷಣಾ ಅಭಿಯಾನ /** |
| (ಉ) | ಜಿಲ್ಲಾ ಮಟ್ಟದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳ ನಿರ್ಲಕ್ಷದಿಂದ ಸರಕಾರಿ ಶಾಲೆಗಳ ಜಾಗ/ಆಸ್ತಿಯನ್ನು ಸರ್ಕಾರದ ಹೆಸರಿಗೆ ವರ್ಗಾವಣೆಯಾಗದಿರುವುದಕ್ಕೆ ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು? | |

| | | |
|---|---|---|
| | | **ಆಂದೋಲನ**" ವನ್ನು ನಿಯಮಾನುಸಾರ ಕೈಗೊಂಡು, ಆಯಾ ಜಿಲ್ಲಾ ವ್ಯಾಪ್ತಿಯಲ್ಲಿನ ಸರ್ಕಾರಿ ಶಾಲೆಗಳ ಮತ್ತು ಸರ್ಕಾರಿ ಶಿಕ್ಷಣ ಸಂಸ್ಥೆಗಳ ಆಸ್ತಿಗಳನ್ನು ಆಯಾ ಸರ್ಕಾರಿ ಶಾಲೆಯ ಹಾಗೂ ಸರ್ಕಾರಿ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ ಖಾತೆ ಮಾಡಿಸಲು ಬಾಕಿಯಿರುವ ಪ್ರಕರಣಗಳಲ್ಲಿ ಸದರಿ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳನ್ನು ಹಾಗೂ ಜಿಲ್ಲಾಡಳಿತಗಳನ್ನು ಕೋರಲಾಗಿದೆ ಮತ್ತು ಶಾಲಾ ಶಿಕ್ಷಣ ಇಲಾಖೆಯ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿದೆ. |

**ಇಪಿ 42 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

# ಅನುಬಂಧ-01

| ಕ್ರ ಸಂ | ಜಿಲ್ಲೆಯ ಹೆಸರು | ಒಟ್ಟು ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ | ಶಾಲಾ ಆಸ್ತಿ ನೊಂದಣಿ ಮಾಡಿರುವ ಶಾಲೆಗಳ ಒಟ್ಟು ಸಂಖ್ಯೆ | ಆಸ್ತಿ ನೊಂದಣಿ ಮಾಡಬೇಕಾಗಿರುವ ಶಾಲೆಗಳ ಒಟ್ಟು ಸಂಖ್ಯೆ | ಷರಾ |
|---|---|---|---|---|---|
| 1 | ಬೆಂಗಳೂರು ಉತ್ತರ | 474 | 262 | 212 | |
| 2 | ಬೆಂಗಳೂರು ದಕ್ಷಿಣ | 840 | 538 | 302 | |
| 3 | ಬೆಂಗಳೂರು ಗ್ರಾಮಾಂತರ | 1032 | 915 | 117 | |
| 4 | ಶಿವಮೊಗ್ಗ | 1789 | 753 | 1036 | |
| 5 | ತುಮಕೂರು | 1935 | 1019 | 916 | |
| 6 | ಕೋಲಾರ | 1744 | 1317 | 427 | |
| 7 | ರಾಮನಗರ | 1135 | 407 | 728 | |
| 8 | ಮಧುಗಿರಿ | 1220 | 453 | 767 | |
| 9 | ದಾವಣಗೆರೆ | 1059 | 512 | 547 | |
| 10 | ಚಿಕ್ಕಬಳ್ಳಾಪುರ | 1382 | 902 | 480 | |
| 11 | ಚಿತ್ರದುರ್ಗ | 1619 | 830 | 789 | |
| 12 | ಮೈಸೂರು | 1830 | 1379 | 451 | |
| 13 | ಚಾಮರಾಜನಗರ | 719 | 382 | 337 | |
| 14 | ದಕ್ಷಿಣ ಕನ್ನಡ | 892 | 76 | 816 | |
| 15 | ಉಡುಪಿ | 559 | 384 | 175 | |

| | | | | | |
|---|---|---|---|---|---|
| 16 | ಹಾಸನ | 2120 | 1472 | 648 | |
| 17 | ಕೊಡಗು | 362 | 194 | 168 | |
| 18 | ಮಂಡ್ಯ | 1501 | 706 | 795 | |
| 19 | ಚಿಕ್ಕಮಗಳೂರು | 1256 | 617 | 639 | |
| 20 | ಬಾಗಲಕೋಟ | 1239 | 1131 | 108 | |
| 21 | ಬೆಳಗಾವಿ | 1348 | 1227 | 121 | |
| 22 | ಚಿಕ್ಕೋಡಿ | 1724 | 1607 | 117 | |
| 23 | ಧಾರವಾಡ | 734 | 386 | 348 | |
| 24 | ಗದಗ | 581 | 415 | 166 | |
| 25 | ಹಾವೇರಿ | 1128 | 989 | 139 | |
| 26 | ಕಾರವಾರ | 915 | 257 | 658 | |
| 27 | ಶಿರಸಿ | 1089 | 468 | 621 | |
| 28 | ವಿಜಯಪುರ | 1788 | 1183 | 605 | |
| 29 | ಬಳ್ಳಾರಿ | 594 | 412 | 182 | |
| 30 | ವಿಜಯನಗರ | 926 | 664 | 262 | |
| 31 | ಬೀದರ್ | 1204 | 852 | 352 | |
| 32 | ಕಲಬುರ್ಗಿ | 1695 | 934 | 761 | |
| 33 | ಕೊಪ್ಪಳ | 893 | 544 | 349 | |
| 34 | ರಾಯಚೂರು | 1372 | 705 | 667 | |
| 35 | ಯಾದಗಿರಿ | 891 | 447 | 444 | |
| | | **41589** | **25339** | **16250** | |

## ಅನುಬಂಧ - 2

| ಸರ್ಕಾರಿ ಪ್ರೌಢ ಶಾಲೆಗಳ ಆಸ್ತಿ ಸಂರಕ್ಷಣಾ ಅಭಿಯಾನಕ್ಕೆ ಸಂಬಂಧಿಸಿದ ಮಾಹಿತಿ. | | | | | |
|---|---|---|---|---|---|
| ಕ್ರ. ಸಂ | ಜಿಲ್ಲೆಯ ಹೆಸರು | ಒಟ್ಟು ಸರ್ಕಾರಿ ಪ್ರೌಢ ಶಾಲೆಗಳ ಸಂಖ್ಯೆ | ಶಾಲಾ ಆಸ್ತಿ ನೊಂದಣಿ ಮಾಡಿರುವ ಶಾಲೆಗಳ ಒಟ್ಟು ಸಂಖ್ಯೆ | ಆಸ್ತಿ ನೊಂದಣಿ ಮಾಡಬೇಕಾಗಿರುವ ಶಾಲೆಗಳ ಒಟ್ಟು ಸಂಖ್ಯೆ | ಷರಾ |
| 1 | ಬೆಂಗಳೂರು ಉತ್ತರ ಜಿಲ್ಲೆ | 60 | 33 | 27 | |
| 2 | ಬೆಂಗಳೂರು ದಕ್ಷಿಣ ಜಿಲ್ಲೆ | 91 | 51 | 40 | |
| 3 | ಬೆಂಗಳೂರು ಗ್ರಾಮಾಂತರ ಜಿಲ್ಲೆ | 64 | 49 | 15 | |
| 4 | ಚಿತ್ರದುರ್ಗ | 115 | 89 | 26 | |
| 5 | ದಾವಣಗೆರೆ ಜಿಲ್ಲೆ | 135 | 90 | 45 | |
| 6 | ಶಿವಮೊಗ್ಗ | 164 | 87 | 77 | |
| 7 | ತುಮಕೂರು | 131 | 88 | 43 | |
| 8 | ಚಿಕ್ಕಬಳ್ಳಾಪುರ ಜಿಲ್ಲೆ | 111 | 72 | 39 | |
| 9 | ಕೋಲಾರ | 124 | 94 | 30 | |
| 10 | ರಾಮನಗರ ಜಿಲ್ಲೆ | 107 | 58 | 49 | |
| 11 | ಮಧುಗಿರಿ ಜಿಲ್ಲೆ | 95 | 74 | 21 | |
| 12 | ಮೈಸೂರು ಜಿಲ್ಲೆ | 233 | 180 | 53 | |
| 13 | ಕೊಡಗು | 47 | 25 | 22 | |
| 14 | ಮಂಡ್ಯ | 215 | 131 | 84 | |
| 15 | ಚಾಮರಾಜನಗರ | 86 | 39 | 47 | |
| 16 | ಉಡುಪಿ | 105 | 55 | 50 | |
| 17 | ಚಿಕ್ಕಮಗಳೂರು | 116 | 59 | 57 | |
| 18 | ಹಾಸನ ಜಿಲ್ಲೆ | 241 | 185 | 56 | |
| 19 | ದಕ್ಷಿಣ ಕನ್ನಡ | 170 | 158 | 12 | |
| 20 | ಬಾಗಲಕೋಟೆ | 190 | 171 | 19 | |
| 21 | ಬೆಳಗಾವಿ | 137 | 99 | 38 | |
| 22 | ಚಿಕ್ಕೋಡಿ | 194 | 169 | 25 | |
| 23 | ಧಾರವಾಡ | 112 | 70 | 42 | |
| 24 | ಗದಗ | 115 | 84 | 31 | |
| 25 | ಹಾವೇರಿ | 155 | 122 | 33 | |
| 26 | ಕಾರವಾರ | 49 | 22 | 27 | |
| 27 | ಶಿರಸಿ | 76 | 39 | 37 | |
| 28 | ವಿಜಯಪುರ | 161 | 91 | 70 | |
| 29 | ಬಳ್ಳಾರಿ | 125 | 91 | 34 | |
| 30 | ವಿಜಯನಗರ | 127 | 100 | 27 | |
| 31 | ಬೀದರ | 167 | 119 | 48 | |
| 32 | ಕಲಬುರಗಿ | 294 | 154 | 140 | |
| 33 | ಕೊಪ್ಪಳ | 185 | 120 | 65 | |
| 34 | ರಾಯಚೂರ | 230 | 154 | 76 | |
| 35 | ಯಾದಗಿರಿ | 144 | 75 | 69 | |
| | ಒಟ್ಟು | **4871** | **3297** | **1574** | |

ನಿರ್ದೇಶಕರು (ಪ್ರೌಢ ಶಿಕ್ಷಣ)
ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು.